ಈ) ಕರಾವಳಿ ವಿಶೇಷ ಆರ್ಥಿಕ ವಲಯ ಸೇರಿದಂತೆ ರಾಜ್ಯದಲ್ಲಿ ಸ್ಥಾಪಿಸಲ್ಪಡುವ ಎಲ್ಲಾ ವಿಶೇಷ ಆರ್ಥಿಕ ವಲಯಗಳಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರವು ಆದೇಶ ಕ್ರಮ ಸಂಖ್ಯೆ 202 ಎಸ್.ಪಿ.ಟಿ 2001 ದಿ : 25.2.2002 ರಲ್ಲಿ ರಾಜ್ಯದ ವಿಶೇಷ ಆರ್ಥಿಕ ವಲಯ ನೀತಿಯನ್ನು ಘೋಷಿಸಿದೆ. ಈ ನೀತಿಯಡಿಯಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆ ಮತ್ತು ಅಂತಹ ವಲಯಗಳಲ್ಲಿ ಸ್ಥಾಪಿಸಲ್ಪಡುವ ಕೈಗಾರಿಕಾ ಘಟಕಗಳಿಗೆ ಮೂಲಭೂತ ಸೌಕರ್ಯ, ವಾಣಿಜ್ಯ ತೆರಿಗೆ ವಿನಾಯಿತಿ, ಕಾರ್ಮಿಕ ಖಾಯ್ದೆಗಳ ಸರಳೀಕೃತ ಅನುಷ್ಠಾನ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಯಿಂದಾಗಿ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಫ್ತು ವಹಿವಾಟು ಹೆಚ್ಚಿಸುವ ಹಾಗೂ ಉದ್ಯೋಗವಕಾಶ ಹೆಚ್ಚಿಸುವ ನಿರೀಕ್ಷೆಯಿದೆ.

502(1145) : ಶ್ರೀ ಯೋಗೀಶ್ ಭಟ್. ಎನ್.(ಮಂಗಳೂರು) ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿ ಇವೆ ಪೂರ್ಣಗೊಳಿಸಲು ತಗಲುವ ವೆಚ್ಚ ಎಷ್ಟು ಹಾಗೂ ಅವದಿ ಎಷ್ಟು?

ಆ) ಕೇಂದ್ರ ಹಗೂ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು? ಯಾವಾಗ ಮಾಡಲಾಗಿದೆ? ಬಾಕಿಯಿರುವ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಇ) ಮಂಗಳೂರು–ಹಾಸನ ರೈಲ್ವೆ ಬ್ರಾಡ್ಗೇಜ್ ಕನ್ವರ್ಷನ್ ಕಾಮಗಾರಿಗಳ ಪೂರ್ಣಗೊಳಿಸಲು, ರಾಜ್ಯ ಸರಕಾರ ಬಿಡುಗಡೆ ಮಾಡಬೇಕಾದ ಹಣ ಎಷ್ಟು; ಯಾವಾಗ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ರನ್ ವೇ ನಿರ್ಮಾಣ ಕಾರ್ಯವನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ(ಎಎಐ) ಸಂಸ್ಥೆಯವರು ಕೈಗೆತ್ತಿಕೊಂಡಿರುತ್ತಾರೆ. ಎರಡನೇ ರನ್‌ವೇ ಕಾಮಗಾರಿಗೆ ಕರ್ನಾಟಕ ರಾಜ್ಯ ಸರ್ಕಾರವು ಸುಮಾರು 11.00 ಕೋಟಿ ರೂ. ಗಳನ್ನು ಭೂಸ್ವಾಧೀನ ಹಾಗೂ ಪುನರ್ವಸತಿ ಕೆಲಸಗಳಿಗಾಗಿ ಖರ್ಚು ಮಾಡಿದೆ ಉಳಿದೆಲ್ಲ ಖರ್ಚುಗಳನ್ನು AAI ಸಂಸ್ಥೆಯು ಭರಿಸಲಿದೆ ರೂ. 11 ಕೋಟಿಗಳನ್ನು ಖರ್ಚು ಮಾಡಿದೆ. ಎರಡನೇ ರನ್ ವೇ ಕಾರ್ಯಾ ಡಿಸೆಂಬರ್ 2005ರ ಹೊತ್ತಿಗೆ ಪೂರ್ಣಗೊಳ್ಳುವ ಸಂಭವವಿದೆ.

ಇ) ಹಾಸನ – ಮಂಗಳೂರು ಗೇಜ್ ಪರಿವರ್ತನೆ ಯೋಜನೆಯ ಕಾಮಗಾರಿಯ ಒಟ್ಟು ವೆಚ್ಚ ರೂ. 291 ಕೋಟಿ ಆಗಿರುತ್ತದೆ. ಈ ಬಗ್ಗೆ ಸ್ಥಾಪನೆಗೊಂಡಿರುವ ಹೆಚ್.ಎಂ.ಆರ್.ಡಿ.ಸಿ (HMRDC)ಯ ಷೇರುದಾರರ ಒಪ್ಪಂದದನ್ವಯ ರಾಜ್ಯ ಸರ್ಕಾರವು ರೂ. 45 ಕೋಟಿ ಈಕ್ವಿಟಿ ನೀಡಬೇಕಾಗಿದೆ. ಈಗಾಗಲೇ ರೂ. 28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯ ಚಟುವಟಿಕೆಗಳು ಬಿರುಸಿನಿಂದ ಸಾಗಿರುತ್ತದೆ. 2005ನೇ ಸಾಲಿನ ಮದ್ಯದಲ್ಲಿ ಈ ಮಾರ್ಗವು ಪೂರ್ಣಗೊಳ್ಳುವ ಗುರಿ ಇದೆ 2004–05ನೇ ಸಾಲಿನ ಪೂರಕ ಅನುದಾನದಲ್ಲಿ ರೂ. 17 ಕೋಟಿಗಳ ಮೊತ್ತವನ್ನು ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.